

ದೀಪಾವಳಿ ಹಬ್ಬದೊಂದಿಗೆ ತಳಕು ಹಾಕಿಕೊಂಡಿರುವ ಬೆಳಕಿನ ಕುರಿತು ಕವಿಗಳು, ದಾರ್ಶನಿಕರು, ತತ್ವಶಾಸ್ತ್ರಜ್ಞರು ಏನೆಲ್ಲ ಹೇಳಿದರೂ, ಜನಸಾಮಾನ್ಯರ ಪಾಲಿಗೆ ದೀವಳಿಗೆಯ ಬೆಳಕೆಂದರೆ ಪಟಾಕಿಯ ಬೆಳಕೇ. ಸದ್ಯದ ಸಂದರ್ಭ ಪಟಾಕಿ ಸಂಭ್ರಮಕ್ಕೆ ಕಡಿವಾಣ ಹಾಕಿದೆ. ಜಾಗತಿಕ ಪರಿಸರ ತುರ್ತು ಚಿಕಿತ್ಸಾ ಘಟಕದ ಸಮೀಪದಲ್ಲಿದೆ. ವಾಯುಮಾಲಿನ್ಯದಿಂದ ಉಂಟಾಗಿರುವ ಉಸಿರಾಟದ ಬಿಕ್ಕಟ್ಟನ್ನು ಕೊರೊನಾ ವೈರಾಣು ಮತ್ತಷ್ಟು ಬಿಗಡಾಯಿಸಿದೆ. ಈ ಸಂದಿಗ್ಧದ ಕಾರಣದಿಂದಲೇ, ಸಾಂಪ್ರದಾಯಿಕ ಪಟಾಕಿಗಳಿಗೆ ಕೆಂಪುಬಿಲ್ಲೆ ತೋರಿಸಿ, ‘ಹಸಿರು ಪಟಾಕಿ’ಗಳಿಗಷ್ಟೇ ಹಸಿರುನಿಶಾನೆ ತೋರಲಾಗಿದೆ. ಪಟಾಕಿ ಸಂಭ್ರಮಕ್ಕೆ ಪ್ರಜ್ಞಾಪೂರ್ವಕವಾಗಿ ಕಡಿವಾಣ ಹಾಕುವುದು ಈ ಹೊತ್ತಿನ ಅಗತ್ಯ. ಅಂದಹಾಗೆ, ಏನಿದು ‘ಹಸಿರು ಪಟಾಕಿ?’. ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದರ ಜೊತೆಗೆ ಪಟಾಕಿಯ ಪುರಾಣ, ಇತಿಹಾಸ, ವರ್ತಮಾನದ ಪುಟಗಳಲ್ಲೊಮ್ಮೆ ಇಣುಕಿಬರುವ ಪ್ರಯತ್ನ ಈ ವಿಶೇಷ ಲೇಖನ.